## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 28-09-2022

### ಬೀದರ ನಗರ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ:169/2022: ಕಲಂ 457,511ಐಪಿಸಿ:

ದಿನಾಂಕ 27/09/2022 ರಂದು 1030 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಪ್ರೇಮನಾಥ ತಂದೆ ರಾಮಣ್ಣಾ ಗಾಂವಕರ ವಯ:39 ವರ್ಷ ಜಾತಿ:ಎಸ್.ಸಿ. ಹೊಲೆಯ ಉ:ಸಹಾಯಕ ಕೆಲಸ ಸಾ/ಪ್ರತಾಪನಗರ ಬೀದರ ಇವರು ಠಾಣೆಗೆ ಹಾಜರಾಗಿ ನೀಡಿರುವ ದೂರಿನ ಸಾರಾಂಶವೇನೆಂದರೆ ಫಿರ್ಯಾದಿಯು ಶ್ರೀ. ಅರವಿಂದಕುಮಾರ ಅರಳಿ ರವರ ಹತ್ತಿರ ಸುಮಾರು 4 ವರ್ಷಗಳಿಂದ ಸಹಾಯಕ ಅಂತ ಕೆಲಸ ಮಾಡಿಕೊಂಡು ಉಪಜೀವಿಸಿಕೊಂಡಿದ್ದು ದಿನಾಂಕ 26/09/2022 ರಂದು ಸಾಯಂಕಾಲ 2000 ಗಂಟೆಗೆ ಶ್ರೀ. ಅರವಿಂದಕುಮಾರ ಅರಳಿ ರವರ ಕಾರ್ಯಲಯಕ್ಕೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದು ದಿನಾಂಕ 27/09/2022 ರಂದು ಮುಂಜಾನೆ 9:45 ಎ.ಎಮ್. ಗಂಟೆಗೆ ಮರಳಿ ಕಾರ್ಯಲಯಕ್ಕೆ ಬಂದು ನೋಡಲಾಗಿ ಕಾರ್ಯಲಯದ ಬೀಗ ಮುರಿದಿದ್ದು ಒಳಗೆ ಹೋಗಿ ನೋಡಲಾಗಿ ಕಾರ್ಯಲಾಯದಲ್ಲಿದ್ದ ಅಲಮಾರದ ಬೀಗ ಮುರಿಯಲು ಪ್ರಯತ್ನ ಮಾಡಿದ್ದು, ಕಛೇರಿಯಲ್ಲಿದ್ದ ಕಾಗದ ಪತ್ರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಮನ್ನಳ್ಳಿ ಪೊಲೀಸ ಠಾಣೆ: ಪ್ರಕರಣ ಸಂಖ್ಯೆ: 47/2022: ಕಲಂ 78(3) ಕರ್ನಾಟಕ ಪೊಲೀಸ ಕಾಯ್ದೆ:

ದಿನಾಂಕ 27/09/2022 ರಂದು ಮನ್ನಳ್ಳಿ ತಡಪಳ್ಳಿ ಗ್ರಾಮದ ಅಂಬೇಡ್ಕರ ಸಮುದಾಯ ಭವನ ಸಮೀಪ ದಿನಾಂಕ 27/09/2022 ರಂದು 20.00 ಗಂಟೆಗೆ ಹೋಗಿ ನಿಂತು ನೋಡಿದಾಗ ಅಂಬೇಡ್ಕರ ಸಮುದಾಯ ಭವನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಲೈಟಿನ ಕಂಬದ ಲೈಟಿನ ಬೆಳಕಿನಲ್ಲಿ ಒಬ್ಬ ವ್ಯಕ್ತಿ ನಿಂತುಕೊಂಡು 01 ರೂಪಾಯಿಗೆ 90/- ರೂ ಕೊಡುವುದಾಗಿ ಜೋರಾಗಿ ಕೂಗುತ್ತಾ ಜನರಿಂದ ಹಣ ಪಡೆದುಕೊಂಡು ಮಟಕಾ ಚೀಟಿಗಳನ್ನು ಬರೆದುಕೊಳ್ಳುತ್ತಿದ್ದ ಬಗ್ಗೆ ಖಚಿತ ಪಡಿಸಿಕೊಂಡು ಇತನ ಮೇಲೆ 20.05 ಗಂಟೆಗೆ, ನಾವುಗಳು ಕೂಡಿ ಪಂಚರ ಸಮಕ್ಷಮ ದಾಳಿ ಮಾಡಿ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡು ಅವನ ಹೆಸರು ವಿಚಾರಿಸಲು ಅವನು ತನ್ನ ಹೆಸರು ಆನಂದ ತಂದೆ ಫಾಳೆಪ್ಪಾ ಭಂಗೂರೆ ವಯಃ 22 ವರ್ಷ ಉಃ ಹೋಟೆಲ ಕೆಲಸ ಸಾಃ ತಡಪಳ್ಳಿ ತಾಃ ಜಿಃ ಬಿದರ ಅಂತ ತಿಳಿಸಿದ್ದು ಇತನ ವಶದಿಂದ ಒಟ್ಟು ನಗದು ಹಣ 550/-ರೂ ಇರುತ್ತದೆ. ಇದರ ಬಗ್ಗೆ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

### ಸಂತಪೂರ ಪೊಲೀಸ ಠಾಣೆ; ಪ್ರಕರಣಸಂಖ್ಯೆ: 98/2022: ಕಲಂ 379 ಐಪಿಸಿ:

ದಿನಾಂಕ 27/09/2022 ರಂದು 12.30 ಗಂಟೆಗೆ ಶ್ರೀ ಕೆ, ಉಮೇಶ ತಂದೆ ಕೆಂಪಯ್ಯಾ ವ, 50 ವರ್ಷ ಜಾ/ ಒಕ್ಕಲಿಗ ಉ/ ಗಾರ್ಡಿಯನ್ ಸೆಕ್ಯೂರಿಟಿ ಬ್ಯೂರೋ ರಲ್ಲಿ ಫೀಲ್ಡ್ ಆಫೀಸರ ಆಗಿ ಕೇಲಸ ಮಾಡುತ್ತಿದ್ದು ಸಾ/ ಬೆಂಗಳೂರ ಮನೆ ನಂ 1325 6 ಮುಖ್ಯೆ ರಸ್ತೆ 6 ನೇ ಆಡ್ಡ ರಸ್ತೆ ತ್ರಿವೇಣಿ ರಸ್ತೆ ಯಶಂತಪೂರ ನಿವಾಸಿಯಾಗಿದ್ದು ರವರು ಠಾಣೆಗೆ ಹಾಜರಾಗಿ ನೀಡಿದ ಸಾರಾಂಶವೇನೆಂದರೆ ಫಿರ್ಯಾದಿಯು 6 ತಿಂಗಳಿಂದ ಆದಾನಿ ಸೋಲಾರ ಪ್ಲಾಂಟ್ 50 ಮೇಗಾ ವ್ಯಾಟ್ಸ ಮಸ್ಕಲ್ ಗಾರ್ಡಯಿನ್ ಕಂಪನಿಯಿಂದ ಸೆಕ್ಯೂರಿಟಿ ಸೇವೆಯನ್ನು ಒದಗಿಸುತ್ತಿದ್ದು ಸೋಲಾರ್ ನಲ್ಲಿ ಜೈಪಾಲ ಸೆಕ್ಯೂರಿಟಿ ಕೇಲಸ ಡಿಬಾಸಿಸ ಸೆಕ್ಯೂರಿಟಿ ಕೇಲಸ ಹಾಗೂ ಇತರರೂ ಕೂಡ ಕೇಲಸ ಮಾಡಿಕೊಂಡಿರುತ್ತಾರೆ. ದಿನಾಂಕ 25/09/2022 ರಂದು ಬೆಳ್ಳಿಗ್ಗೆ 0630 ಗಂಟೆಗೆ ಸೋಲಾರ ಪ್ಲಾಂಟಿನ ಸಿಬ್ಬಂದಿಯವರಾದ ಆನಂತ ರವರು ಯಾಕೋ ( ಇನ್ವಟರ್ 102.104.115.116 ಬ್ಲಾಕ ನಂ 08) ರಲ್ಲಿ ವಿದ್ಯುತ ಉತ್ಪಾದನೆ ಆಗದೆ ಇದ್ದಾಗ ಚೆಕ್ ಮಾಡುತ್ತಾ ಹೋಗಿದ್ದಾಗ ಇವುಗಳ ಡಿ.ಸಿ ಕೇಬಲ್ ವಾಯರನು ಕಳವು ಆದ ಬಗ್ಗೆ ಕಂಡು ಬಂದಿರುತ್ತದೆ. ಅದನು ಮತ್ತೆ ಚಕ್ಕ ಮಾಡಿದ್ದು ಒಟ್ಟು 1100 ಮೀಟರ್ ಕಳವು ಆಗಿದೆ ಅದರ ಅ,ಕಿ 40.000-/ ಆಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.